**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**O.S.No.52/2016.**

ದಿನಾಂಕ **28.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿಯ ಹೆಸರು | : | ಶ್ರೀ ಪ್ರಕಾಶ್ | PW 4 |
| ತಂದೆಯ ಹೆಸರು | : | ಗೋವಿಂದಪ್ಪ | |
| ವಯಸ್ಸು | : | **58** ವರ್ಷ | |
| ಉದ್ಯೋಗ | : | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಟಿಎಂಸಿ ಬೀರೂರು | |
| ವಾಸ | : | ಕಡೂರು | |

ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಯು ಎಸ್ ವಕೀಲರಿಂದಃ

ಅಸೆಸ್ ಮೆಂಟ್ ಸಂ.1047 ನಮ್ಮ ಇಲಾಖೆಯ ಅಸೆಸ್ ಮೆಂಟ್ ರಿಜಿಸ್ಟ್ರಿನ ಪ್ರಕಾರಣ ಕುಲುಮೆ ರಂಗಯ್ಯ ರವರಿಗೆ ಸೇರಿದ್ದಾಗಿರುತ್ತದೆ. ಸದರಿ ಅಸೆಸ್ ಮೆಂಟ್ ರಿಜಿಸ್ಟರ್ 1942 ರಿಂದ 1947 ರ ವರೆಗೂ ಕುಲುಮೆ ರಂಗಯ್ಯ ರವರ ಹೆಸರಿನಲ್ಲಿ ಇದೆ. ಸದರಿ ಕುಲುಮೆ ರಂಗಯ್ಯ ರವರ ಹೆಸರು ಖಾತೆಯಿಂದ 1956-57 ನೇ ಸಾಲಿನಲ್ಲಿ ಬಿಟ್ಟುಹೋಗಿರುತ್ತದೆ. ಆದಾದ ನಂತರ 1974-75 ರ ದಾಖಲೆ ಪ್ರಕಾರ ಸದರಿ ಅಸೆಸ್ ಮೆಂಟ್ ಜಾಗ ಸರ್ಕಾರದ ಜಾಗವಾಗಿದ್ದು ಅಲ್ಲಿ ಒಂದು ಬಾವಿ ಇದೆ ಎಂದು ನಮೂದು ಇರುತ್ತದೆ. ಅದು ಸರ್ಕಾರಿ ಜಾಗ ಎಂದು ಹೇಗೆ ಖಾತೆ ಬದಲಾಗಿದೆ ಎಂದರೆ ಸಾಕ್ಷಿಯು ಯಾವುದೇ ಷರಾ ಇರುವುದಿಲ್ಲ 1974 ರಿಂದ 1988-89 ರ ವರೆಗೂ ಸರ್ಕಾರಿ ಜಾಗ ಎಂದು ಖಾತೆ ಇರುತ್ತದೆ. ಇದಾದ ನಂತರ ದಿಃ17.09.1990 ರಂದು ಟಿ ಎಂ ಸಿ ಸಭೆಯ ವಿಷಯ ಸಂ.62 ರಂತೆ ಸದರಿ ಅಸೆಸ್ ಮೆಂಟ್ ಸಂ.1047 ರ ಜಾಗವನ್ನು ಅಸೆಸ್ ಮೆಂಟ್ ನಂ.5079/5211 ರಂತೆ ಮರುಳಪ್ಪ ರವರ ಹೆಸರಿಗೆ ಬದಲಾಗಿದೆ ಎಂದು ದಾಖಲೆ ಇದೆ.

ಕುಲುಮೆ ರಂಗಯ್ಯ ರವರಿಂದ ಮರುಳಪ್ಪ ರವರಿಗೆ ಯಾವುದೇ ರೀತಿಯ ಮಾರಾಟವಾಗಿರುವುದಿಲ್ಲ ಎಂದರೆ ಸರಿ. ನಮ್ಮ ಇಲಾಖೆಯಲ್ಲಿ ಖಾತೆ ಬದಲಾವಣೆ ಮಾಡಲು ನೋಂದಾಯಿತ ಪತ್ರಗಳು ಬೇಕಾಗುತ್ತದೆ ಎಂದರೆ ಸರಿ. ರುದ್ರಪ್ಪ ಬಿನ್ ದೊಡ್ಡಈರಪ್ಪ ರವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಅವರು ಕ್ರಯಪತ್ರ ನೀಡಿರುತ್ತಾರೆ. ಸದರಿ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ಕ್ರಯಪತ್ರದಲ್ಲಿ ನಮೂದು ಇರುವ ಅಸೆಸ್ ಮೆಂಟ್ ಸಂಖ್ಯೆ ಗೆ ಮಾತ್ರ ಖಾತೆ ಬದಲಾವಣೆ

ಮಾಡಬೇಕಾಗುತ್ತದೆ ಎಂದರೆ ಸರಿ. ಅಸೆಸ್ ಮೆಂಟ್ ಸಂಖ್ಯೆಯಲ್ಲಿ MTH ಎಂದು ಇದ್ದರೆ ಅದೇ ಜಾಗಕ್ಕೆ ಖಾತೆ ಬದಲಾವಣೆಯಾಗಬೇಕಾಗುತ್ತದೆ ಎಂದರೆ ಸರಿ.

ಅಸೆಸ್ ಮೆಂಟ್ ಸಂ.1047/2150 ರ ಜಾಗ ಈಗ ಖಾಲಿ ಜಾಗವಾಗಿರುತ್ತದೆ ಎಂದು ನಮ್ಮ ಇಲಾಖೆಯ ರೆವಿನ್ಯೂ ಇನ್ಸಪೆಕ್ಟರ್ ಸ್ಥಳಕ್ಕೆ ಹೋಗಿ ಫೋಟೋ ತೆಗೆದುಕೊಂಡು ಬಂದಿರುತ್ತಾರೆ. ಬಿ ಟಿ ರಾಮಚಂದ್ರಪ್ಪ ರವರು ಖಾತೆ ಮಾಡಲು ನಮ್ಮ ಕಛೇರಿಗೆ ಅರ್ಜಿ ನೀಡಿರುತ್ತಾರೆ ಎಂದರೆ ಸರಿ. ಆ ಪ್ರಕಾರವಾಗಿ ಮುನ್ಸಿಪಾಲ್ ರೆಸಲೂಷನ್ ಆಗಿರುತ್ತದೆ, ಆದರೆ ಖಾತೆ ಬದಲಾವಣೆ ಆಗಿರುವುದಿಲ್ಲ. ನಿಪಿ 6 ನಮ್ಮ ಕಛೇರಿಗೆ ಹಾಜರುಪಡಿಸಿದ ಪತ್ರ ಎಂದರೆ ಸರಿ.

ಅಸೆಸ್ ಮೆಂಟ್ ನಂ.5079/2211 ರ ಜಾಗ ಬಾವಿಮನೆ ಬೀದಿಯಲ್ಲಿ ಇದೆ. ಸದರಿ ಅಸೆಸ್ ಮೆಂಟ್ ನ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಕ್ರಯಪತ್ರವನ್ನು ತಿದ್ದುಪಡಿ ಮಾಡುವ ಅಧಿಕಾರ ನನಗೆ ಇಲ್ಲ ಎಂದರೆ ಸರಿ. ಅಸೆಸ್ ಮೆಂಟ್ ಸಂ.5079/2211 ರ ಅಸೆಸ್ ಮೆಂಟ್ ರಿಜಿಸ್ಟರ್ ನಮ್ಮ ಕಛೇರಿಯಲ್ಲಿ ಇದೆಯೋ ಇಲ್ಲವೋ ಎಂದರೆ ಸಾಕ್ಷಿಯು 5079/5211 ರ ಅಸೆಸ್ ಮೆಂಟ್ ರಿಜಿಸ್ಟರ್ ನಮ್ಮ ಬಳಿ ಇದೆ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎನ್ ಎ ವಕೀಲರಿಂದಃ

ನಾನು ಕಳೆದ 2 ವರ್ಷಗಳಿಂದ ಬೀರೂರು ಮುನ್ಸಿಪಾಲಿಟಿಯಲ್ಲಿ ಕರ್ತವ್ಯ ನಿವರ್ಹಿಸುತ್ತಿದ್ದೇನೆ. ಅಸೆಸ್ ಮೆಂಟ್ ಸಂ.5079/5129 ರ ಖಾತೆಯು ರುದ್ರಪ್ಪ ಬಿನ್ ದೊಡ್ಡಈರಪ್ಪ ರವರ ಹೆಸರಿಗೆ ನಮ್ಮ ಕಛೇರಿಯಲ್ಲಿ ಬದಲಾವಣೆಯಾಗಿರುತ್ತದೆ ಎಂದರೆಸರಿ. ಅದೇ ಖಾತೆಗೆ ನಾವು ಕಂದಾಯ ವಸೂಲಿ ಮಾಡಿಕೊಳ್ಳುತ್ತಿದ್ದೇವೆ ಎಂದರೆ ಸರಿ. ಸದರಿ ಅಸೆಸ್ ಮೆಂಟ್ ಸಂಖ್ಯೆ ಈಗ 5079/5129 ರಿಂದ ಈಗ 5079/2211 ಎಂದು ಬದಲಾಗಿದೆ ಎಂದರೆ ಕ್ರಯಪತ್ರದಲ್ಲಿ ತಪ್ಪು ನಮೂದಾಗಿರುತ್ತದೆ ನಮ್ಮ ಕಛೇರಿ ದಾಖಲೆ ಪ್ರಕಾರ ಬದಲಾವಣೆಯಾಗಿಲ್ಲ ಎಂದು ನುಡಿಯುತ್ತಾರೆ. ಅಸೆಸ್ ಮೆಂಟ್ ನಂ.5079/5129 ರ ವಿಸ್ತೀರ್ಣ ನಮ್ಮ ದಾಖಲೆಗಳ ಪ್ರಕಾರ 35 X 47 ಅಡಿ ಆಗಿರುತ್ತದೆ. ನಿಡಿ 9 ರಂತೆ ಪ್ರತಿವಾದಿಗಳು ಖಾತೆ  ಮಾಡಲು ನೀಡಿದ ಅರ್ಜಿಯಂತೆ ವಿಸ್ತೀರ್ಣ 35 X 47 ಅಡಿ ಎಂದು ನಮೂದು ಮಾಡಿರುತ್ತಾರೆ. ಈದಿನವರೆಗೂ ಪ್ರತಿವಾದಿಗಳು ಕಂದಾಯ ಪಾವತಿ ಮಾಡಲು

ಕಛೇರಿಗೆ ಹೋದರೆ ನಾವು ಕಟ್ಟಿಸಿಕೊಳ್ಳುತ್ತೇವೆ ಎಂದರೆ ಸರಿ.

ಖಾತೆ ಮಾಡಲು ಅರ್ಜಿ ನೀಡಿದ ಸಮಯದಲ್ಲಿ ಸದರಿ ಅರ್ಜಿಯಲ್ಲಿ ಉಪ್ಪಾರ ಕ್ಯಾಂಪ್ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ಉಪ್ಪಾರ ಕ್ಯಾಂಪ್‌ನಲ್ಲಿ ಅಶೋಕ ನಗರ ಬರುತ್ತದೆ ಎಂದರೆ ಸರಿ.

ನಮ್ಮ ದಾಖಲೆಗಳ ಪ್ರಕಾರ ಈ ವರೆಗೂ ದಾವಾ ಆಸ್ತಿಯ ಖಾತೆಯು ವಾದಿಯ ತಂದೆಗಾಗಲೀ, 1 ಅಥವಾ 2 ನೇ ವಾದಿಗಾಗಲೀ ಖಾತೆ ಬದಲಾವಣೆಯಾಗಿಲ್ಲ ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಮುನ್ಸಿಪಾಲಿಟಿಯಲ್ಲಿ ಆದ ರೆಷಲೂಷನ್ ನಿ 38 ಆಗಿರುತ್ತದೆ ಎಂದರೆ ಸರಿ. ಸದರಿ ರೆಷಲೂಷನ್ 1999 ರಂದು ಒಂದೇ ದಿನ ಆಗಿರುತ್ತದೆ ಎಂದರೆ ಸರಿ. ನಿಪಿ 38 ರ ರಿಜಿಸ್ಟರಿನ 1 ಭಾಗದಲ್ಲಿ ಒಬ್ಬ ವ್ಯಕ್ತಿಯ ಬರಹ ಇನ್ನೊಂದು ಭಾಗದಲ್ಲಿ ಇನ್ನೊಬ್ಬರ ಕೈಬರಹ ಇರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ರೆಷಲೂಷನ್ ಅನ್ನು ಅಧ್ಯಕ್ಷರು ಬರೆಯುತ್ತಾರೆ ಹಾಗೂ ಇನ್ನೊಂದು ಭಾಗದಲ್ಲಿ ನಮೂದು ಇರುವ ವಿಚಾರವನ್ನು ಸಿಬ್ಬಂದಿಗಳು ಬರೆಯುತ್ತಾರೆ. ಸದರಿ ರೆಷಲೂಷನ್ ಮಾಡುವ ಕಾಲದಲ್ಲಿ ನಾನು ಪುರಸಭೆಯಲ್ಲಿ ಸಿಬ್ಬಂಧಿಯಾಗಿ ಕರ್ತವ್ಯ ನಿರ್ವಹಿಸುತ್ತಿದೆ. ಸದರಿ ರೆಷಲೂಷನ್ ಮಾಡುವಾಗ ಖಾತೆಯಲ್ಲಿ ಅಸೆಸ್ ಮೆಂಟ್ ಸಂಖ್ಯೆ ತಪ್ಪಾಗಿದೆ ಎಂದು ಸಂಬಂಧಪಟ್ಟವರಿಗೆ ಅಂದರೆ 1 ನೇ ಪ್ರತಿವಾದಿಯ ಗಂಡನಿಗೆ ನೋಟೀಸು ನೀಡಿರುತ್ತೀರಾ ಎಂದರೆ ನೋಟೀಸು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದರಿಸ ನೋಟೀಸಿನ ಪ್ರತಿಗಳು ನಮ್ಮ ಕಛೇರಿಯಲ್ಲಿ ಇವೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಸಲು ನಮಗೆ ಯಾವುದೇ ತೊಂದರೆ ಇಲ್ಲ.

ನಮಗೆ ಖಾತೆ ಬದಲಾವಣೆಗೆ ಅರ್ಜಿ ಬಂದರೆ, ನಾವು ರಾಜಸ್ವ ನಿರೀಕ್ಷಕರಿಗೆ ಅರ್ಜಿ ತೋರಿಸಿ ಕಾನೂನು ಸಲಹೆ ಪಡೆದು ನಂತರ ಬದಲಾವಣೆ ಮಾಡುತ್ತೇವೆ ಎಂದರೆ ಸರಿ. ಹೀಗೆ ಬದಲಾವಣೆ ಮಾಡಲು 30 ದಿನಗಳ ಕಾಲವಕಾಶ ಇದೆ ಎಂದರೆ ಸರಿ. ಒಂದು ವೇಳ ಸ್ಥಳ ತನಿಖೆ ಮಾಡಲು ಅವಶ್ಯಕತೆ ಇದ್ದಾಗ ಮಾಡುತ್ತೇವೆ ಎಂದರೆ ಸಾಕ್ಷಿಯು ಆರ್ ಐ ರವರು ಮಾಡುತ್ತಾರೆ ಎಂದು ನುಡಿಯುತ್ತಾರೆ.

1 ನೇ ವಾದಿಯ ಅಜ್ಜ ಕುಲುಮೆರಂಗಯ್ಯ ರವರಿಗೆ ದಾವಾ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ಮಾಲೀಕತ್ವ ತೋರಿಸಲು ಮಾಲ ದಾಖಲೆ ನಮ್ಮ ಕಛೇರಿಯಲ್ಲಿ

ಇಲ್ಲ. ಕುಲುಮೆರಂಗಯ್ಯ ರವರ ಹೆಸರಿನಲ್ಲಿ ಇದ್ದ ಖ್ಯಾತೆ ಮದ್ಯದಲ್ಲಿ ಏಕೆ ಬಿಟ್ಟುಹೋಗಿರುತ್ತದೆ ಎಂದು ನಮ್ಮ ಬಳಿ ದಾಖಲೆಗಳು ಇಲ್ಲ. ವಾನಿಗಳು ಖಾತೆ ಮದ್ಯದಲ್ಲಿ ಬಿಟ್ಟು ಹೋಗಿದೆ ಎಂದು ನಮ್ಮಗಳ ವಿರುದ್ಧ ದಾವೆ ಸಲ್ಲಿಸಿದ್ದಾರೋ ಎಂದರೆ ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಆರ್ ಐ ರವರು ಪೋಟೋ ತೆಗೆದುಕೊಂಡು ಬಂದಿರುತ್ತಾರೆ ಎಂದು ಹೇಳಿದ್ದು, ಆ ರೀತಿ ಪೋಟೋ ತೆಗೆಯಲು ಯಾವ ದಿನಾಂಕ ಕಳುಹಿಸಿದ್ದಿರಿ ಎಂದರೆ ಸಾಕ್ಷಿಯು ಅವರು ಚೆಕ್ಕುಬಂಧಿಯ ದಾಖಲೆ ನೀಡಲು ಹೋಗಿದ್ದಾಗ ತೆಗೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ 39 ರಲ್ಲಿನ ಚೆಕ್ಕುಬಂಧಿಯು ಪ್ರತಿವಾದಿಯ ಸ್ವತ್ತಿಗೆ ಸಂಬಂಧಪಟ್ಟ ಚೆಕ್ಕುಬಂದಿ ಎಂದರೆ ಸಾಕ್ಷಿಯು ಅದರಲ್ಲಿ ಅಸೆಸ್ ಮೆಂಟ್ ಸಂಖ್ಯೆ ನಮೂದು ಇದ್ದು ಸದರಿ ಅಸೆಸ್ ಮೆಂಟ್ ಗೆ ಸಂಬಂಧಪಟ್ಟ ಚೆಕ್ಕುಬಂಧಿ ಎಂದು ನುಡಿಯುತ್ತಾರೆ. ನಿಪಿ 39 ರಲ್ಲಿನ ಚೆಕ್ಕುಬಂಧಿಯು ಹಿಂದಿನಿಂದಲೂ ಬರುತ್ತಿದೆ ಎಂದು ತೋರಿಸಲು ವಾದಿಗಳು ನಮಗೆ ಚೆಕ್ಕುಬಂಧಿಯ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಿಪಿ 39 ರ ದಾಖಲೆಯನ್ನು ನಾವು ವಾದಿಗಳ ಜೊತೆ ಷರಿಕ್ಕಾಗಿ ಪ್ರತಿವಾದಿಗಳ ಜಮೀನು ಲಪಟಾಯಿಸುವ ಉದ್ದೇಶದಿಂದ ಸೃಷ್ಟಿಸಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಗಳಿಂದ ಕಂದಾಯ ಪಾವತಿ ಮಾಡಿಸಿಕೊಂಡ ಬಗ್ಗೆ 2015 ರಿಂದ 2017 ರ ವರೆಗೂ ಪಾವತಿ ರಶೀದಿ ನೀಡಿರುತ್ತೇವೆ ಎಂದರೆ ಸರಿ. ಆದಾದ ನಂತರವೂ ಪ್ರತಿವಾದಿಗಳು ಅಸೆಸ್ ಮೆಂಟ್ ಸಂಖ್ಯೆ 5079 ಕ್ಕೆ ಕಂದಾಯ ಪಾವತಿ ಮಾಡಿದ್ದಾರೆ ಎಂದರೆ ಸರಿ.

ಸಾಮಾನ್ಯವಾಗಿ ಸ್ವಾಧೀನ ಮತ್ತು ಮಾಲೀಕತ್ವ ಹೊಂದಿದ್ದರೆ ಮಾತ್ರ ಕಂದಾಯ ಪಾವತಿ ಮಾಡಿಸಿಕೊಳ್ಳುವ ಅಧಿಕಾರ ನಮಗೆ ಇದೆ ಎಂದರೆ ಸರಿ. ಅದೇ ರೀತಿ ಸಾಮಾನ್ಯವಾಗಿ ನಾವು ಕಂದಾಯ ಪಾವತಿ ಮಾಡಿಸಿಕೊಳ್ಳುವಾಗ ಹಿಂದಿನ ಕಂದಾಯ ಪಾವತಿಯಾಗಿದೆಯೇ ಎಂದು ಖಚಿತ ಪಡಿಸಿಕೊಂಡು ನಂತರ ಪಾವತಿ ಮಾಡಿಸಿಕೊಳ್ಳುತ್ತೇವೆ ಎಂದರೆ ಸರಿ.

ನಿಪಿ 33 ರಿಂದ 39 ರ ದಾಖಲೆಗಳನ್ನು ವಾದಿಯ ಜೊತೆ ಷರಿಕ್ಕಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 29 ರ ದಾಖಲೆಯು 1998-99 ರಲ್ಲಿ ನಮ್ಮ ಇಲಾಖೆಯಿಂದ ನೀಡಿದ ಅಸೆಸ್ ಮೆಂಟ್ ದಾಖಲೆ ಎಂದರೆ ಸರಿ. ನಿಪಿ 29 ರ ಪ್ರಕಾರ ಅಸೆಸ್ ಮೆಂಟ್ ಸಂ.5129/5079 ರಂತೆ 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಖಾತೆ ನಮೂದಾಗಿರುತ್ತದೆ

ಎಂದರೆ ಸರಿ. ನಾನು ಪ್ರತಿವಾದಿಯ ಆಸ್ತಿಯನ್ನು ವಾದಿಗೆ ಕೊಡಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸೆಸ್ ಮೆಂಟ್ ಸಂ.1047 ಹೊಸ ಸಂಖ್ಯೆ 2150 ಅದೇ ರೀತಿ ಹಳೆಯ ನಂ.5079 ಹೊಸ ಸಂ.2211 ಈ ಎರಡೂ ಅಸೆಸ್ ಮೆಂಟ್ ಗಳು ಬೇರೆ ಬೇರೆ ಜಾಗಕ್ಕೆ ಸಂಬಂಧಪಟ್ಟ ಸಂಖ್ಯೆಗಳು ಎಂದರೆ ಸರಿಯಲ್ಲ. ಎರಡೂ ಬೇರೆ ಬೇರೆ ಸ್ವತ್ತಿನ ಅಸೆಸ್ ಮೆಂಟ್ ಸಂಖ್ಯೆಯಾಗಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1998-99 ರಲ್ಲಿ ಅಸೆಸ್ ಮೆಂಟ್ ಸಂ.5129/5079 ಎಂದು ನಾವು ಬದಲಾವಣೆ ಮಾಡಿರುತ್ತೇವೆ ಎಂದರೆ ಸಾಕ್ಷಿಯು ನಮ್ಮ ಕಛೇರಿಯಲ್ಲಿ ಪ್ರತಿ 5 ವರ್ಷಕ್ಕೆ ಒಮ್ಮೆ ಅಸೆಸ್ ಮೆಂಟ್ ಸಂಖ್ಯೆ ಬದಲಾವಣೆಯಾಗುತ್ತದೆ ಎಂದು ನುಡಿಯುತ್ತಾರೆ.

2004 ರಿಂದ ಇತ್ತೀಚೆಗೆ ಅಸೆಸ್ ಮೆಂಟ್ ಸಂಖ್ಯೆ 5129/5079 ಯಾವುದೇ ಬದಲಾವಣೆಯಾಗಿರುವುದಿಲ್ಲ. ನಮ್ಮ ಕಛೇರಿಯಲ್ಲಿ ಅಸೆಸ್‌ಮೆಂಟ್ ಸಂಖ್ಯೆ ಬದಲಾವಣೆ ಮಾಡುವ ದಾಖಲೆಗಳು ಇವೆ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ,

sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.